

# ಭಾವ ಸಂಚಯದ ಅನಾವರಣ

ಹಿರಿಯ ಕವಿ ಪುತಿನ ಅವರ ಎದುರು ನನ್ನ ಕವನವನ್ನು ಓದುವಂತಹ ಸುವರ್ಣಾವಕಾಶ ನನಗೂ ದೊರಕಿತ್ತು. ಕವಿತೆಗಳ ಕುರಿತು ಮಾತನಾಡುವಾಗ ಪುತಿನ ನನ್ನ ಕವನವನ್ನೂ ಕೂಡ ಉಲ್ಲೇಖಿಸಿದಾಗ ನನಗೆ ಅತೀವ ಸಂತಸವಾಗಿತ್ತು.

■ ಬನವಾಸಿ ಕೃಷ್ಣಮೂರ್ತಿ

ಕವಿಯಾದವನಿಗೆ ಮಹಾನ್ ಕವಿಗಳು ಎಂದಿಗೂ ಪ್ರೇರಕ ಶಕ್ತಿಯೇ. ಹಿರಿಯ ಸಾಧಕರಿಂದ ಕವನದ ಬಗ್ಗೆ ಅಭಿಪ್ರಾಯ ತಿಳಿಯುವುದು, ಅವರಿಂದ ಪುಸ್ತಕ ಬಿಡುಗಡೆ ಮಾಡಿಸುವುದು... ಎಲ್ಲವೂ ಪುಳಕ ನೀಡುವ ವಿಚಾರವೇ. ನಾಡಿನ ಹಿರಿಯ ಕವಿಯಾಗಿದ್ದ ಪು.ತಿ. ನರಸಿಂಹಾಚಾರ್ ಅವರಿಂದ ಕವನ ಸಂಕಲನ ಬಿಡುಗಡೆ ಮಾಡಿಸಿ ಪ್ರತಿಯನ್ನು ಅವರ ಅಮೃತಹಸ್ತದಿಂದಲೇ ಪಡೆಯುವ ಸುಯೋಗ ಒದಗಿದ್ದು ನನ್ನ ಸೌಭಾಗ್ಯವೇ ಸರಿ.

ಕಾಲೇಜು ದಿನಗಳಿಂದಲೇ ಆಗಾಗ್ಗೆ ಕವನ, ಲೇಖನಗಳನ್ನು ಬರೆಯುವ ಹವ್ಯಾಸ ರೂಢಿಸಿಕೊಂಡಿರುವ ನಾನು. ಸರ್ಕಾರಿ ಉದ್ಯೋಗ ದೊರೆತ ನಂತರವೂ ಇದನ್ನು ಮುಂದುವರೆಸುತ್ತಲೇ ಬಂದಿದ್ದೇನೆ. ಸಚಿವಾಲಯ ಸೇವೆಗೆ 1982 ರಲ್ಲಿ ಸೇರಿದಾಗ ನನಗೆ ಆಗಿನ್ನೂ 21 ರ ಪ್ರಾಯ. ನಾಲ್ಕು ತಿಂಗಳ ಸೇವಾ ಅವಧಿ ಮುಗಿಯುತ್ತಾ ಬಂದಾಗ ಸಚಿವಾಲಯದಲ್ಲಿ ಮೋಹನ್ ವೇರ್ಣೇಕರ, ಪ್ರೇಮಾ ಭಟ್ ಅವರ ಪರಿಚಯವಾಯಿತು. ಅವರ ಪರಿಚಯ ನನ್ನ ಬರವಣಿಗೆಯ ಹವ್ಯಾಸಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಿತ್ತು.

ಇದೇ ರೀತಿಯ ಸಾಹಿತ್ಯ, ಕಲೆಯ ಹವ್ಯಾಸವನ್ನು ರೂಢಿಸಿಕೊಂಡಿದ್ದ ಜಿ.ವಿ. ಅತ್ರಿ, ಮುಕುಂದ ಪುರೋಹಿತ, ಬಿ.ಕೆ.ಎಸ್. ವರ್ಮಾ, ನೀಲಾವರ ಸುರೇಂದ್ರ ಅಡಿಗ, ಸು.ವಿ. ಮೂರ್ತಿ, ಉಮಾ ಗಂಜಾಂ ಮುಂತಾದವರೆಲ್ಲ ಹತ್ತಿರವಾಗುತ್ತಾ ಹೋದರು. ನಾವು ಹವ್ಯಾಸಿ ಬರಹಗಾರರು ‘ಪರಸ್ಪರ’ ಹೆಸರಿನಲ್ಲಿ ಬಳಗವೊಂದನ್ನು ರೂಪಿಸಿಕೊಂಡು ಪ್ರತಿ ತಿಂಗಳ ಮೊದಲ ಭಾನುವಾರ ಬೆಂಗಳೂರಿನ ಕತ್ರಿಗುಪ್ಪೆಯಲ್ಲಿ ಸು.ವಿ. ಮೂರ್ತಿಯವರು ಕಾರ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಸಭೆ ಸೇರುತ್ತಿದ್ದೆವು. ಆ ತಿಂಗಳಲ್ಲಿ ನಮ್ಮ ಪೈಕಿ ಯಾರ ಯಾರ ಲೇಖನಗಳು, ಬರಹಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಎಂಬುದರ ಬಗ್ಗೆ ಚಿಂತನ ಮಂಥನ ನಡೆಸುತ್ತಿದ್ದೆವು. ಜೊತೆಗೆ ಹೊಸ ಬರವಣಿಗೆಯ ಕುರಿತು ಹಿರಿಯರಿಂದ ಸೂಕ್ತ ಸಲಹೆಗಳೂ ದೊರೆಯುತ್ತಿದ್ದವು. ಅಂತಹ ಒಂದು ಸಲಹೆ, ‘ಭಾವ ಸಂಚಯ’ ಎಂಬ ಕವನ ಸಂಕಲನದ ಬಿಡುಗಡೆ ಕಾರ್ಯಕ್ರಮದ ಮೂಲಕ ಸಾಕಾರಗೊಂಡಿತ್ತು.

1989 ರ ಸೆಪ್ಟೆಂಬರ್ ತಿಂಗಳಲ್ಲಿ ಹವ್ಯಾಸಿ ಕವಿಗಳ ಕವನ ಸಂಕಲವೊಂದನ್ನು ನಮ್ಮ ‘ಪರಸ್ಪರ’ ಬಳಗದ ವತಿಯಿಂದ ಹೊರತರಲು ನಿರ್ಧರಿಸಲಾಗಿತ್ತು. ಸುಮಾರು 40 ಕವಿಗಳ ಆಯ್ದ ಕವನಗಳನ್ನು ಅದರಲ್ಲಿ ಸೇರ್ಪಡೆ ಮಾಡಿದ್ದೆವು. ಖ್ಯಾತ ಕವಿಗಳಾದ ಪು.ತಿ.ನರಸಿಂಹಾಚಾರ್, ಹೆಚ್.ಎಸ್. ವೆಂಕಟೇಶ ಮೂರ್ತಿಯವರನ್ನು ಆ ಬಿಡುಗಡೆಯ ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು. ಪು.ತಿ.ನ. ಅವರ ಸಮ್ಮುಖದಲ್ಲಿ ಕೆಲವು ಕವನಗಳನ್ನು ವಾಚನ ಮಾಡಲಾಯಿತು. ನಂತರ ಪು.ತಿ.ನ.ಅವರು ಎಲ್ಲ ಕವನಗಳ ಕುರಿತು ಮಾತಾಡಿದರು. ಪುತಿನ ಅವರ ಎದುರು ನನ್ನ ಕವನವನ್ನು ಓದುವಂತಹ ಸುವರ್ಣಾವಕಾಶ ನನಗೂ ದೊರಕಿತ್ತು. ಕವಿತೆಗಳ ಕುರಿತು ಮಾತನಾಡುವಾಗ ಪುತಿನ ನನ್ನ ಕವನವನ್ನೂ ಕೂಡ ಉಲ್ಲೇಖಿಸಿದಾಗ ನನಗೆ ಅತೀವ ಸಂತಸವಾಗಿತ್ತು. ಅಂತಹ ಮೇರು ಕವಿಗಳ ಸಮ್ಮುಖದಲ್ಲಿ ನನ್ನದೊಂದು ಕವನ ವಾಚನ ಮಾಡಿದ್ದು ಮತ್ತು ಪು.ತಿ.ನ. ಅವರ ಕೈಯಿಂದ ಕವನ ಸಂಕಲನ ‘ಭಾವ ಸಂಚಯ’ವನ್ನು ಸ್ವೀಕರಿಸಿದ್ದು ನನ್ನ ಜೀವನದಲ್ಲಿ ಒಂದು ಅಮೃತ ಘಳಿಗೆ ಎಂದೇ ಭಾವಿಸುತ್ತೇನೆ.

ಈ ಘಟನೆಯ ನಂತರ ನನ್ನ ಅನೇಕ ಕವನಗಳು, ಲೇಖನಗಳು, ಬರಹಗಳು ನಾಡಿನ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ, ಪು.ತಿ.ನ ಮತ್ತು ಹೆಚ್.ಎಸ್.ವೆಂಕಟೇಶಮೂರ್ತಿಯವರ ಸಮ್ಮುಖದಲ್ಲಿ ನಡೆದ ‘ಭಾವ ಸಂಚಯ’ದ ಬಿಡುಗಡೆ ಹಾಗೂ ಅಂದು ಸೇರಿದ್ದ ಸಮಾನ ಮನಸ್ಕ ಲೇಖಕರ ಹಾಜರಿ ನನ್ನ ನೆನಪಿನಂಗಳದಲ್ಲಿ ಸದಾ ಹಸಿರಾಗಿರುತ್ತದೆ. ■